ಗೆ,
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಕುಷ್ಟಗಿ ಇವರಿಗೆ

ಮಾನ್ಯರೇ,

ವಿಷಯ: ಅನಧಿಕೃತ ಕೋಚಿಂಗ್ ಸೆಂಟರ್ ನಡೆಸುವ ಕುರಿತು.

ಉಲ್ಲೇಖ: ತಮ್ಮ ಕಾರ್ಯಾಲಯದ ಪತ್ರದ ಸಂಖ್ಯೆ ಸಿ.ವಿ-2
ಅನಧಿಕೃತ/ಕೋಚಿಂಗ್ ಸೆಂಟರ್ -2015-16 ದಿನಾಂಕ:12-05-2015

* * *

ಮಾನ್ಯರೆ,

ಈ ಮೂಲಕ ಮೇಲಿನ ವಿಷಯ ಹಾಗೂ ಉಲ್ಲೇಖದನ್ವಯ ಇಲಾಖೆಯಿಂದ 2013-14 ನೇ ಸಾಲಿಗೆ 1 ರಿಂದ 5 ನೇ ತರಗತಿಗೆ ಶಾಲಾ ನಡೆಸಲು ಅನುಮತಿ ಪಡೆದಿದ್ದು, ಪ್ರಸ್ತುತ 1 ಮತ್ತು 2ನೇ ತರಗತಿ ನಡೆಸುತ್ತಿದ್ದು, ದೂರದ ಹಳ್ಳಿಯಿಂದ ಕೆಲವು ಪಾಲಕರು ನಮ್ಮ ಶಾಲೆಯಲ್ಲಿ ತಮ್ಮ ಮಕ್ಕಳ ಪ್ರವೇಶ ಪಡೆದಿದ್ದು, ದಿನಾಲು ಊರಿಗೆ ಹೋಗಲು ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ಹಾಗೂ ಸಣ್ಣ ಮಕ್ಕಳಿರುವ ಕಾರಣ ನಮ್ಮ ಶಾಲೆಯಲ್ಲಿ ಬಿಟ್ಟಿರುತ್ತಾರೆ. ಈ ಕಾರಣಕ್ಕಾಗಿ ಸದರಿ ಮಕ್ಕಳಿಗೆ ಊಟ ಮತ್ತು ವಸತಿ ವ್ಯವಸ್ಥೆ ತಾತ್ಕಾಲಿಕವಾಗಿ ಮಾಡಲಾಗಿರುತ್ತದೆ. ದಿನಾಂಕ: 11-05-2015 ರಂದು ತಾವು ಬೇಟಿ ನೀಡಿದ ಸಂದರ್ಭದಲ್ಲಿ ಕಂಡತಹ ಮಕ್ಕಳಲ್ಲಿ ಭಾಗಶಃ ಸ್ಥಳಿಯ ವಿದ್ಯಾರ್ಥಿಗಳಾಗಿದ್ದು, ಸದರಿ ವಿದ್ಯಾರ್ಥಿಗಳು ತಮ್ಮ ಪಾಲಕರೊಂದಿಗೆ ಸಾಯಂಕಾಲ ಮನೆಗೆ ತೆರಳುತ್ತಾರೆ. ದೂರದ ಊರಿನಿಂದ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಮಾತ್ರ ನಮ್ಮಲ್ಲಿ ಇರುತ್ತಾರೆ. ಮಾನ್ಯರು ತಾವೇ ತಿಳಿಸಿದ ಪ್ರಕಾರ ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಪ್ರಕಾರ ನಮ್ಮ ಶಾಲೆಯನ್ನು ಕೋಚಿಂಗ್ ಸೆಂಟರ್ ವಸತಿ ಸಹಿತ ಘಟನೋತ್ತರ ಅನುಮತಿ ನೀಡಿ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಅನುಮತಿ ನೀಡಲು ಕೋರುತ್ತಾ ನಿಯಮಾವಳಿಗಳ ಅಗತ್ಯ ದಾಖಲೆಗಳೊಂದಿಗೆ ತಮ್ಮ ಕಾರ್ಯಾಲಯಕ್ಕೆ ವಸತಿ ಸಹಿತ ಕೋಚಿಂಗ್ ಸೆಂಟರ್ ನಡೆಸಲು ಅನುಮತಿ ಪ್ರಸ್ತಾವನೆ ಸಲ್ಲಿಸಲಾಗುತ್ತದೆ. ಈ ಮೂಲಕ ಲಿಖಿತ ಹೇಳಿಕೆ ನೀಡುತ್ತಾ ಕೋಚಿಂಗ್ ಸೆಂಟರ್ ಪ್ರಾರಂಭಿಸಲು ಯಾರ ಹೆಸರಿಗೆ ಡಿ.ಡಿ. ಪಡೆಯಬೇಕೆಂಬ ಮಾಹಿತಿ ನೀಡಲು ಕೋರಲಾಗಿದೆ. ಅಲ್ಲದೇ ಸದ್ಯ ನಡೆಯುತ್ತಿರುವ ಬೇಸಿಗೆ ತರಬೇತಿ ಮಕ್ಕಳ ಹಿತದೃಷ್ಟಿಯಿಂದ ಮುಂದುವರೆಸಲು ಅನುಮತಿ ನೀಡಲು ಕೋರುತ್ತಾ ನಮ್ಮ ಸಂಸ್ಥೆಯು ಮೂಲಭೂತ ಸೌಲಭ್ಯಗಳನ್ನು ಹೊಂದಿರುತ್ತದೆ ಎಂದು ಈ ಮೂಲಕ ತಿಳಿಸುತ್ತೇವೆ.

ಸ್ಥಳ:ಕುಷ್ಟಗಿ

ದಿನಾಂಕ: 13/05/15

ತಮ್ಮ ವಿಶ್ವಾಸಿ
ಮುಖ್ಯಾಧ್ಯಾಪಕರು
ವಿದ್ಯಾ ಜ್ಯೋತಿ ಪೂರ್ವ ಪ್ರಾಥಮಿಕ
ಮತ್ತು ಸುಧಾಮಿಕ ಶಾಲೆ. ಕುಷ್ಟಗಿ
ತಾ|| ಕುಷ್ಟಗಿ ಜಿ||ಕೊಪ್ಪಳ

ಇದರ ಪ್ರತಿಯನ್ನು:

1) ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೊಪ್ಪಳ ಇವರಿಗೆ ಮಾಹಿತಿಗಾಗಿ ಮತ್ತು ಸದರಿ ಸಂಸ್ಥೆಯನ್ನು ಘಟನೋತ್ತರ ವಸತಿ ಸಹಿತ ಕೋಚಿಂಗ್ ಸೆಂಟರ್ ನಡೆಸಲು ಅನುಮತಿ ನೀಡಲು ಕೋರಲಾಗಿದೆ.

LIVEWORKSHEETS